## Workshop on reducing alcohol related health harms in Mysuru

**<u>Media Update</u>**

**Pre-Event:**



# ಮದ್ಯಪಾನ ಮತ್ತು ರಸ್ತೆ ಸುರಕ್ಷತೆ ಕುರಿತು ಜಾಗೃತಿ ಅಭಿಯಾನ 9ರಂದು

ಮೈಸೂರು: ನಗರದ ಕ್ರೈಸ್ಟ್ ಕಾಲೇಜಿನಲ್ಲಿ ಜು. 9 ರಂದು ಯುವಜನತೆಯಲ್ಲಿ ಹೆಚ್ಚುತ್ತಿರುವ ಅತಿಯಾದ ಹಾಗೂ ಬೇಜವಾಬ್ದಾರಿ ಮದ್ಯಪಾನದ ಪ್ರವೃತ್ತಿ ತಡೆಯಲು ಮತ್ತು ರಸ್ತೆ ಸುರಕ್ಷತೆಯನ್ನು ಉತ್ತೇಜಿಸಲು ವಿಶೇಷ ಜಾಗೃತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ರಾಷ್ಟ್ರೀಯ ಗ್ರಾಹಕ ಹಕ್ಕುಗಳ ಸಂಘಟನೆ ಕನ್ಸೂ ಮರ್‌ವಾಯ್ಸ್', ಲಾಭರಹಿತ ಆರೋಗ್ಯ ಸಂಸ್ಥೆ 'ಎಫ್‌ಎಸ್‌ಎಚ್‌ಐ, ಮೈಸೂರು ವಿವಿ ಎನ್.ಎಸ್.ಎಸ್ ಹಾಗೂ ಕ್ರೈಸ್ಟ್ ಕಾಲೇಜಿನ ಎನ್.ಎಸ್.ಎಸ್ ಘಟಕದ ಜಂಟಿ ಸಹಯೋ ಗದಲ್ಲಿ ಈ ಅಭಿಯಾನ ನಡೆಯಲಿದೆ. ಕಾಲೇಜಿನ ಪ್ರಾಂಶು ಪಾಲ ಆಗಸ್ಟೀನ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಎನ್.ಎಸ್.ಎಸ್ ಅಧಿಕಾರಿ ವೇದರಾಜ್ ಕೂರಗಲ್ ಅವರು ವಿದ್ಯಾರ್ಥಿ ಗಳಿಗೆ ಪ್ರತಿಜ್ಞಾ ವಿಧಿ ಬೋಧಿಸುವರು.

**Post-Event:**

# ಕನ್ನಡಪ್ರಭ

# ಜವಾಬ್ದಾರಿಯುತ ಆಯ್ಕೆಗೆ ಅಗತ್ಯ ಜ್ಞಾನ ಹೊಂದಿ

## ವಿದ್ಯಾರ್ಥಿಗಳಿಗೆ ಕ್ರೈಸ್ಟ್ ಕಾಲೇಜಿನ ಪ್ರಾಂಶುಪಾಲ ಫಾ. ಅಗಸ್ಟೀನ್ ಸಲಹೆ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಕ್ರೈಸ್ಟ್ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಘಟಕ, ಕನ್‌ಸ್ಯೂಮರ್‌ವಾಯ್ಸ್ ಮತ್ತು ಫಾರ್‌ಸಸ್ಟೇನಬಲ್ ಹೆಲ್ತ್ ಇಂಡಿಯಾ ಸಹಯೋಗದಲ್ಲಿ ಆಯೋಜಿಸಿದ್ದ ಯುವಕರಲ್ಲಿ ಹೆಚ್ಚುತ್ತಿರುವ ಅಜಾಗರೂಕ ಮದ್ಯ ಸೇವನೆ ಮತ್ತು ರಸ್ತೆ ಸುರಕ್ಷತೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಗುರುವಾರ ಆಯೋಜಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಕಾಲೇಜಿನ ಪ್ರಾಂಶುಪಾಲ ಫಾ. ಅಗಸ್ಟೀನ್ ಮಾತನಾಡಿ, ಅತಿಯಾದ ಮತ್ತು ಹಾನಿಕಾರಕ ಮದ್ಯ ಸೇವನೆಯು ದೈಹಿಕ ಮತ್ತು ಮಾನಸಿಕ ಆರೋಗ್ಯ, ಶೈಕ್ಷಣಿಕ ಸಾಧನೆ, ಕುಟುಂಬ ಸಂಬಂಧಗಳು, ಸಾರ್ವಜನಿಕ ಸುರಕ್ಷತೆ ಮತ್ತು ಆರ್ಥಿಕ ಉತ್ಪಾದಕತೆಯ ಮೇಲೆ ಪರಿಣಾಮ ಬೀರುತ್ತದೆ.

ಹೀಗಾಗಿ, ಯುವಕರು ಜವಾಬ್ದಾರಿಯುತ ಆಯ್ಕೆಗಳನ್ನು ಮಾಡಲು ಅಗತ್ಯವಾದ ಜ್ಞಾನವನ್ನು ಹೊಂದಿರಬೇಕು ಎಂದು ಹೇಳಿದರು.

ಕನ್‌ಸ್ಯೂಮರ್‌ವಾಯ್ಸ್ ಸಂಸ್ಥೆಯ ಸಲಹೆಗಾರ ಹೇಮಂತ್ ಉಪಾಧ್ಯಾಯ ಮಾತನಾಡಿ, ಇಂದಿನ ಕುಡಿತದ ಮಾದರಿಗಳು ಮಾದಕತೆಯಿಂದ ಕೂಡಿದ ಸೇವನೆಯ ಕಡೆಗೆ ಹೆಚ್ಚು ಒಲವು ತೋರುತ್ತಿವೆ. ಅನೇಕ ವ್ಯಕ್ತಿಗಳು ಅತಿಯಾದ ಕುಡಿತದಲ್ಲಿ ತೊಡಗುತ್ತಿದ್ದಾರೆ ಎಂದರು.



ಕ್ಲಿನಿಕಲ್ ಸೈಕಾಲಜಿಸ್ಟ್ ಡಾ. ಪ್ರಶಾಂತ್ ಮಾತನಾಡಿ, ಹೃದಯರೋಗ, ಮಧುಮೇಹ, ದೀರ್ಘಕಾಲದ ಉಸಿರಾಟದ ಕಾಯಿಲೆಗಳು ಮತ್ತು ಕ್ಯಾನ್ಸರ್‌ನಿಂದಾಗುವ ಅಕಾಲಿಕ ಸಾವುಗಳನ್ನು ಕಡಿಮೆ ಮಾಡಲು ಮದ್ಯ ಸೇವನೆಯನ್ನು ಕಡಿಮೆ ಮಾಡುವುದು ಅತ್ಯಗತ್ಯ ಎಂದು ತಿಳಿಸಿದರು.

ರಸ್ತೆ ಸುರಕ್ಷತೆಯ ಬಗ್ಗೆ ಸಂಚಾರ ವಿಭಾಗದ ಸಿದ್ದೇಶ್ ವಿವರಿಸಿದರು. ಫಾರ್‌ಸಸ್ಟೇನಬಲ್ ಹೆಲ್ತ್ ಇಂಡಿಯಾ ಸಂಸ್ಥೆಯ ಎಸ್.ಡೆ. ಚಂದರ್, ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳಾದ ವೇದರಾಜ್ ಕೊರಗಲ್, ಎಂ.ಆರ್. ರಾಬಿನ್ ಶರತ್ ಕುಮಾರ್, ಎಂ. ಶಶಿಕಿರಣ್, ಬಿ.ಬಿ. ಸೌಬಿಯ, ಸಿ.ಎಸ್. ರಂಜಿತಾ, ಕೆ.ಪಿ. ದಿವ್ಯಾ ಮೊದಲಾದವರು ಇದ್ದರು.